

# ಕೊನೆಯ ಕಾವ್ಯ

## ವಿಷಾದದ ಪಲ್ಲವಿ; ಚೈತನ್ಯದ ಚರಣ



**ಛಾಯಾಗ್ರಾಹಕರಾಗಿ ಮತ್ತು ಪ್ರಾಧ್ಯಾಪಕರಾಗಿ ಸಂವೇದನಾಶೀಲತೆಯನ್ನೇ ಉಸಿರಾಡುತ್ತಿದ್ದವರು ಕೆ.ಎಸ್. ರಂಗನಾಥ್. ತಮ್ಮ ಛಾಯಾಗ್ರಹಣಕ್ಕಾಗಿ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡಿರುವ ಅವರು, ಕಲೆಯ ವಿದ್ಯಾರ್ಥಿಗಳಿಗೆ ನೆಚ್ಚಿನ ಮೇಷ್ಟ್ರು ಆಗಿದ್ದರು. ಕಳೆದ ವರ್ಷ ಕೊರೊನಾಗೆ ಬಲಿಯಾದ ಅವರ ನೆನಪಿನಲ್ಲಿ ಮೇ 16ರಿಂದ 22ರವರೆಗೆ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ 'ದ ಲಾಸ್ಟ್ ಪೊಯೆಮ್' ಹೆಸರಿನಲ್ಲಿ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ.**



**■ ಆಯೇಷಾ**

ಸವೆದ ಹಾದಿಗುರುತಿನಿಂದಲೇ ತಿಳಿಯುತ್ತದೆ – ಅದು ತುಂಬ ಜನರು ಓಡಾಡುವ ಜಾಗ ಎಂದು. ಎಷ್ಟೋ ಜನರು ಬಂದು ಕೂತು, ವಿಶ್ರಮಿಸಿಕೊಂಡು ಎದ್ದು ಹೋದ ಮೇಲೆ, ಉದ್ಯಾನದ ಆ ಬೆಂಚು ಒಂಟಿಯಾಗಿ ನಿಂತೇ ಇದೆ. ಯಾರಿಗಾಗಿ ಎದುರು ನೋಡುತ್ತಿದೆ ಅದು? ಯಾವ ಹಸ್ತದ ಬಿಸುಪು ತನ್ನ ತೋಳನ್ನು ಸವರಲೆಂದು ಬಯಸುತ್ತಿದೆ ಅದರ ಮನಸ್ಸು? ನಕ್ಕು, ಬಿಕ್ಕಳಿಸಿ, ಮೌನವನ್ನೇ ಮುಕ್ಕಳಿಸಿ ಎದ್ದು ಹೋದವರ ಮನಸ ಸಂಭ್ರಮ–ಸಂತಾಪಗಳನ್ನೆಲ್ಲ ಭರಿಸುತ್ತಲೇ ಇರುವ ಆ ಬೆಂಚು ಕೊನೆಗೂ ಒಂಟಿಯಾಗೇ ಉಳಿದುಬಿಟ್ಟಿತೆ?

***

ಅರ್ಧ ಅರಳಿದ ಮುಗುಳು, ಮುಗುಳುನಗೆಯನ್ನೇ ಮರೆಮಾಚಿ ನಿಂತಿರುವ ಹುಡುಗಿ, ಪೂರ್ತಿ ಅರಳುವ ಆಸೆಯನ್ನು ಬಿಂಬಿಸುವ ಹೂವು – ಒಮ್ಮೆ ಒಂದರ ಮುಂದುವರೆಯುವಿಕೆಯಾಗಿ ಇನ್ನೊಂದಾಗಿ, ಇನ್ನೊಮ್ಮೆ ಒಂದರ ವಿರುದ್ಧವಾಗಿ ಇನ್ನೊಂದಾಗಿ, ಮತ್ತೊಮ್ಮೆ ಪರಸ್ಪರ ಸಂಬಂಧವೇ ಇಲ್ಲದ ಸ್ವತಂತ್ರ ಚಿತ್ರಗಳಾಗಿ ಕಾಣುವ ಆ ಮೂರು ಚಿತ್ರಗಳು ಕಟ್ಟುತ್ತಿರುವ ಕಥೆ ಯಾವುದು? ಅಥವಾ ಎಲ್ಲವನ್ನೂ ಕಥೆಯಾಗಿ ಹೆಡೆಮುರಿ ಕಟ್ಟಬಲ್ಲೆ ಎಂಬ ಅಹಂಕಾರವನ್ನೇ ಅಣುಕಿಸುತ್ತಿವೆಯೇ ಅವು?

ಮಾಯದ ಲೋಕದಿಂದ ಇಲ್ಲಿಗೆ, ನಮ್ಮ ಕಾಲಬುಡಕ್ಕೇ ಹಬ್ಬಿಕೊಳ್ಳುತ್ತಿರುವಂಥ ಬೇರು (ಅದು ಬರೀ ಮರದ ಬೇರಷ್ಟೇ ಅಲ್ಲವೇ ಅಲ್ಲ!), ಒರಡು ತೊಗಟೆಯನ್ನೊಡೆದುಕೊಂಡು ಹೊರಗಿಣುಕುತ್ತಿರುವ ಎಳೆಯ ಚಿಗುರು, ಮನುಷ್ಯನ ಮನಸ್ಸಿನ ವಿಕೃತಿಗೇ ಮೂರ್ತರೂಪ ಕೊಟ್ಟ ಹಾಗಿರುವ ಮರದ ಮೈಮೇಲಿನ ಗೀರು, ಖಾಲಿ ಕುರ್ಚಿಯೆದುರು ಮುಂಜಾನೆಯ ಕನಸಿನಷ್ಟೇ ಹಗುರಾಗಿ ತೇಲುತ್ತಿರುವ ಹೂಗಳ ನವಿರು – ಹೀಗೆ ಇಲ್ಲಿನ ಒಂದೊಂದು ಚಿತ್ರಗಳೂ ನಮ್ಮ ಮನಸ್ಸಿನ ಒಳಗೆ ಒಂದೊಂದು ಭಾವಗುಚ್ಛವನ್ನು ಊರುತ್ತ ಹೋಗುತ್ತವೆ. ಕಪ್ಪು–ಬಿಳುಪಿನ ಮೋಡಿಯೇ ಅವುಗಳ ಕಥನಶಕ್ತಿಯನ್ನು ಹೆಚ್ಚಿಸಿದಂತಿವೆ. ಜೊತೆಗೆ ಈ ಎಲ್ಲ ಚಿತ್ರಗಳ ಹಿಂದೆ ಕೆಲಸ ಮಾಡಿದ ಜೀವನ್ಮುಖಿ ಮನಸ್ಸಿನ ಕುರಿತೂ ಕುತೂಹಲವನ್ನು ಹುಟ್ಟಿಸುತ್ತದೆ.

ಈ ಚಿತ್ರಗಳನ್ನು ತೆಗೆದಿದ್ದು ಕೆ.ಎಸ್. ರಂಗನಾಥ. ಕಳೆದ ವರ್ಷ, ಕೊರೊನಾಗೆ ಈಡಾಗಿ ಜೀವತೆತ್ತ ರಂಗನಾಥ್ ಅವರ ಆಯ್ದ 45 ಚಿತ್ರಗಳ ಪ್ರದರ್ಶನಕ್ಕೆ ಇಟ್ಟ ಹೆಸರು 'ದ ಲಾಸ್ಟ್ ಪೊಯೆಮ್' (ಕೊನೆಯ ಕಾವ್ಯ). ಕಾವ್ಯ ಅನ್ನುವುದು ರಂಗನಾಥ್ ಅವರ ಎಲ್ಲ ಚಿತ್ರಗಳಿಗೂ ಚೆನ್ನಾಗಿ ಒಪ್ಪುತ್ತದೆ; ಈ ಚಿತ್ರಗಳಲ್ಲಿನ ಜೀವಂತಿಕೆಯನ್ನು, ಧ್ವನಿಶಕ್ತಿಯನ್ನು ಪ್ರತಿನಿಧಿಸಲು ಅದಕ್ಕಿಂತ ಬೇರೆ ಶಬ್ದ ಇಲ್ಲವೇನೋ. 'ಕೊನೆಯ' ಎಂಬ ಶಬ್ದವೂ ಈ ಛಾಯಾಚಿತ್ರ ಪ್ರದರ್ಶನಕ್ಕೊಂದು ವಿಷಾದದ ಚೌಕಟ್ಟನ್ನೂ ಹಾಕಿದೆ.

1966ರಲ್ಲಿ ಜನಿಸಿದ ರಂಗನಾಥ್ ಅವರು 1987ರಲ್ಲಿ ಚಿತ್ರಕಲಾ ಪರಿಷತ್‌ನ 'ಕಾಲೇಜ್ ಆಫ್ ಆರ್ಟ್ಸ್'ನಲ್ಲಿ ಲಲಿತಕಲೆಯಲ್ಲಿ ಪದವಿ ಮುಗಿಸಿದರು. ನಂತರ ಬರೋಡಾದ ಎಂ.ಎಸ್. ಯೂನಿವರ್ಸಿಟಿಯಲ್ಲಿ 1990ರಲ್ಲಿ ಅನ್ವಯಿಕ